ಧಾರವಾಡದಲ್ಲಿರುವ ಬೀಜನಿಗಮದವರಿಂದ ಬೀಜಗಳ ಮಾರಾಟ

೧೭೪ (೬೭೫) ಶ್ರೀ ಚಂದ್ರಶೇಖರ ಪಾಟೀಲ (ಸವದತ್ತಿ).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;—

ಅ) ಬೀಜನಿಗಮ ಧಾರವಾಡ ಇವರು ರೈತರಿಗೆ ಕಳಪೆ ಸೂರ್ಯಕಾಂತಿಯ ಬೀಜಗಳನ್ನು ಮಾರಾಟ ಮಾಡಿದ್ದು, ಸರಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ತಪ್ಪಿತಸ್ಥರ ಮೇಲೆ ಸರಕಾರದವರು ಕೈಗೊಳ್ಳಲಾದ ಕ್ರಮವೇನು ?

ಆ) ನಾವು ಈಗಾಗಲೇ ಈ ವಿಷಯದ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳ ಗಮನಕ್ಕೆ ತಂದರೂ ಕೂಡ ಯಾವುದೇ ಕ್ರಮ ಜರುಗಿಸದೇ ವಿಳಂಬವಾಗುತ್ತಿರಲು ಕಾರಣವೇನು ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು),—

ಅ) ಇಲ್ಲಾ ಸ್ವಾಮಿ, ತಪ್ಪಿತಸ್ಥರ ಮೇಲೆ ಸರ್ಕಾರದವರು ಕೈಗೊಳ್ಳಬೇಕಾದ ಕ್ರಮವು ಉದ್ಭವಿಸುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರು ಮೃಗಾಲಯಂ

೧೮೦ (೭೨೨) ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೮ರಲ್ಲಿ ಮೈಸೂರು ಮೃಗಾಲಯ ವೀಕ್ಷಿಸಿದವರ ಸಂಖ್ಯೆ ಎಷ್ಟು ? ಹಾಗೂ ವಸೂಲಾದ ಚಂದಾ ಹಣವೆಷ್ಟು ?

ಆ) ೧೯೮೮ರಲ್ಲಿ ಮೃಗಾಲಯ ಪ್ರಾಣಿಗಳ ಸಂರಕ್ಷಣೆ ಹಾಗೂ ಆಹಾರಕ್ಕಾಗಿ ವೆಚ್ಚವಾದ ಹಣವೆಷ್ಟು ?

ಇ) ೧೯೮೮ರಲ್ಲಿ ಮೃಗಾಲಯದ ವಿವಿಧ ಶಾಖೆಗಳಲ್ಲಿ ಕೆಲಸ ಮಾಡುತ್ತಿದ್ದವರ ಒಟ್ಟು ಸಂಖ್ಯೆ ಎಷ್ಟು ? ಹಾಗೂ ಅವರಿಗಾಗಿ ಸಂಬಳ ಮತ್ತಿತರ ಭತ್ಯೆಗಳಿಗಾಗಿ ವೆಚ್ಚವಾದ ಹಣವೆಷ್ಟು ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ೧೯೮೮ರ ಜನವರಿ ಮಾಹೆಯಿಂದ ಡಿಸೆಂಬರ್ ಮಾಹೆಯವರೆಗೂ ಒಟ್ಟು ೨೦,೭೩,೫೮೬ ಜನರು ಮೃಗಾಲಯವನ್ನು ವೀಕ್ಷಿಸಿರುತ್ತಾರೆ. ಇವರಲ್ಲಿ ೧೬,೩೭,೯೩೭ ಜನ ದೊಡ್ಡವರು ಮತ್ತು ೪,೩೫,೬೪೯ ಜನ ಚಿಕ್ಕವರು ಪ್ರವೇಶದ ಚಂದಾ ಹಣ ಒಟ್ಟು ರೂ. ೩೭,೧೧,೫೨೨ ಸಂಪಾದನೆಯಾಗಿರುತ್ತದೆ.

ಆ) ೧೯೮೮ರ ಜನವರಿಯಿಂದ ಡಿಸೆಂಬರ್‌ವರೆವಿಗೂ ಪ್ರಾಣಿಗಳ ಆಹಾರಕ್ಕಾಗಿ ರೂ. ೧೮,೬೦,೮೫೫.೫೫ ಮತ್ತು ಔಷಧೋಪಚಾರಕ್ಕಾಗಿ ರೂ. ೪೮,೦೩೬.೪೫ ಗಳನ್ನು ಖರ್ಚು ಮಾಡಲಾಗಿದೆ.

ಇ) ೧೯೮೮ನೇ ಸಾಲಿನಲ್ಲಿ ಮೃಗಾಲಯದ ವಿವಿಧ ಶಾಖೆಗಳಲ್ಲಿ ಒಟ್ಟು ೧೬೯ ಜನ ಕೆಲಸ ನಿರ್ವಹಿಸುತ್ತಿದ್ದರು. ಇವರುಗಳ ಸಂಬಳ ದಿನಗೂಲಿ, ಭವಿಷ್ಯನಿಧಿ, ಪ್ರವಾಸಭತ್ಯೆ, ಮೆಡಿಕಲ್ ರೀ ಎಂಬರ್ಸ್‌ಮೆಂಟ್ ಇತ್ಯಾದಿಗಳಿಗಾಗಿ ಒಟ್ಟು ರೂ. ೨೪,೬೬,೭೦೧.೫೦ಗಳನ್ನು ಖರ್ಚು ಮಾಡಲಾಗಿದೆ.